**PW.3**

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 1, 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ.NR ವಕೀಲರಿಂದಃ-**

ಸಾಬಣ್ಣ ರವರಿಗೆ ದಾವಾ ಸರ್ವೇ ನಂ. ಜೊತೆಗೆ ಬೇರೆ ಸರ್ವೇ ನಂಬರಗಳಲ್ಲಿ ಕೂಡ ಜಮೀನು ಇದ್ದವು. ಎಷ್ಟು ಸರ್ವೇ ನಂಬರಗಳಲ್ಲಿ ಜಮೀನು ಇದ್ದವು ನನಗೆ ಗೊತ್ತಿಲ್ಲ. ನನಗೆ ಸಾಬಣ್ಣ ನ ತಂದೆಯ ಹೆಸರು ಗೊತ್ತಿಲ್ಲ. ಅವರ ಮನೆತನದ ಅಡ್ಡ ಹೆಸರು ದೊಣ್ಯ ನಾಯಕ. ಸಿದ್ದಣ್ಣ ನನಗೆ ಮಾವ ಆಗಬೇಕು. ಸಿದ್ದಣ್ಣನ ತಂದೆ ಹೆಸರು ಸಾಬಣ್ಣ, ಸಾಬಣ್ಣ ನ ತಂದೆ ಹೆಸರು ಕಾಶಪ್ಪ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕ ರವರ ಹೆಸರಿಗೆ 2 ಜಮೀನುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಕೂಡ್ಲಾ ಗ್ರಾಮದಸರ್ವೇ ನಂ.738 ರ ಜಮೀನು ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕನ ಮೊದಲನೆ ಹೆಂಡತಿಯ ಮಕ್ಕಳ ಹೆಸರಿನಲ್ಲಿ ಇವೆ ಎಂದರೆ ಸಾಬಣ್ಣನಿಗೆ ಒಬ್ಬಳೇ ಹೆಂಡತಿ ಎಂದು ಹೇಳುತ್ತಾರೆ. ವಾದಿ ಸಿದ್ದಣ್ಣ ಬದುಕಿರುವವರೆಗೆ ಸರ್ವೇ ನಂ.738 ರ ಸಂಬಂಧ ಯಾವುದೇ ದಾವೆ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ ಸಿದ್ದಣ್ಣನಿಗೆ 3 ಜನ ಮಕ್ಕಳು. ನಾನು ವಾದಿಯರ ಸಂಬಂಧಿಯಾಗಿರುವ ಕಾರಣ ಶರಣಪ್ಪನ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕ ರವರಿಗೆ ಒಬ್ಬಳೇ ಹೇಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಾಶಪ್ಪರವರಿಗೆ ಇ ಬ್ಬ ರು ಹೆಂಡತಿಯರು , ಮೊದಲೆನೆ ಹೆಂಡತಿ ಲಕ್ಷ್ಮಮ್ಮ ಮತ್ತು ಎರಡನೇ ಹೆಂಡತಿ ಬಸಮ್ಮ ಎಂದರೆ ಸರಿಯಲ್ಲ. ಲಕ್ಷ್ಮಮ್ಮನಿಗೆ ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ 3 ಜನ ಮಕ್ಕಳು ಎಂದರೆ ಸರಿಯಲ್ಲ. ಸರ್ವೇ ನಂ. 738 ರ ಜಮೀನನ್ನು ಸಾಬ್ಬಣ್ಣ ನ ಮೊದಲನೆ ಹೆಂಡತಿ ಯ ಮಗ ದ್ಯಾವಪ್ಪ ಮತ್ತು ಕಾಶಪ್ಪ ನ ಹೆಂಡತಿ

ಕಾಶಮ್ಮನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನನಗೆ ಈ ಮೇಲಿನ ಸಂಗತಿಗಳು ಗೊತ್ತಿದ್ದರು ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(5ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ BSS ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**

PW.4

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- 1, 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ.NR ವಕೀಲರಿಂದಃ-</u>**

ನನ್ನ ತಂದೆಯ ಹೆಸರು ವಿಠಲ್ ರಾವ್. ನನ್ನ ತಾತನ ಹೆಸರು ಸಾಯಬಣ್ಣ. ವಿಠಲ್ ರಾವ್ ತಂದೆ ಸಾಯಬಣ್ಣ ಕೊಡ್ಲಾದವರು. ಸಿದ್ದಣ್ಣನ ತಂದೆ ಹೆಸರು ಸಾಬಣ್ಣ. ಸದರಿ ಸಾಬಣ್ಣನ ತಂದೆ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರು ಸಾಬಣ್ಣ, ಸಿದ್ದಣ್ಣ ತಂದೆ ಸಾಬಣ್ಣ ಮತ್ತು ನನ್ನ ತಾತ ಸಾಬಣ್ಣ ಬೇರೆ ಬೇರೆ ಎಂದರೆ ಸರಿ. ಸಾಕ್ಷಿ ಮುಂದುವೆರೆದು ದಾಯಾದಿಗಳು ಆಗಬೇಕು ಎಂದು ಹೇಳುತ್ತಾರೆ. ನಮ್ಮ ಮನೆಯ ಅಡ್ಡ ಹೆಸರು ಹೊನ್ನನಾಯಕ. ಕೊಡ್ಲಾದಲ್ಲಿ ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕ ಅನ್ನುವ ಹೆಸರಿನ ವ್ಯಕ್ತಿ ಒಬ್ಬರೆ ಇದ್ದರು ಎಂದರೆ ಸರಿ. ಸಾಬಣ್ಣ ತಂದೆ ಕಾಶಪ್ಪ ಹೊನ್ನನಾಯಕರವರಿಗೆ ಎಷ್ಟು ಸರ್ವೇ ನಂಬರಗಳಲ್ಲಿ ಜಮೀನುಗಳು ಇದ್ದವು ನನಗೆ ಗೊತ್ತಿಲ್ಲ. ನನಗೆ ಜಮೀನು ಇಲ್ಲ, ಮನೆ ಇದೆ. ಮನೆಯ ನಂಬರ ಗೊತ್ತಿಲ್ಲ. ಮಳಖೇಡ ಮತದಾರರ ಯಾದಿಯಲ್ಲಿ ನನ್ನ ಹೆಸರು ಇದೆ. ನನ್ನ ಆಧಾರ ಕಾರ್ಡ ಮಳಖೇಡ ವಿಳಾಸದಲ್ಲಿದೆ. ನಾನು ಕೊಡ್ಲಾದವನು ಎಂದು ಯಾವುದೇ ದಾಖಲಾತಿ ಇಲ್ಲ. ನಮ್ಮ ಮನೆ ನನ್ನ ತಾತ ಸಾಯಬಣ್ಣ ನ ಹೆಸರಿನಲ್ಲಿದೆ. ನನ್ನ ತಾತ ಸಾಯಬಣ್ಣನ ತಂದೆ ಹೆಸರು ನನಗೆ ಗೊತ್ತಿಲ್ಲ. ನಮ್ಮ ಮನೆಯ ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ, ಉತ್ತರಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ, ದಕ್ಷಿಣಕ್ಕೆ ಯಾರ ಮನೆ ಇದೆ ಎಂದು ಗೊತ್ತಿಲ್ಲ. ಸಿದ್ದಣ್ಣ ತಂದೆ ಸಾಬಣ್ಣ ಯಾವ ಗ್ರಾಮದವರು ನನಗೆ ಗೊತ್ತಿಲ್ಲ. ಸಿದ್ದಣ್ಣ ತಂದೆ ಸಾಬಣ್ಣರವರಿಗೆ ಯದ್ಲಾಪುರ ಎಂಬ ಅಡ್ಡ ಹೆಸರಿನಿಂದ ಕೂಡ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದದು ಹೊನ್ನನಾಯಕ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ಸಾಬಣ್ಣನ ತಂದೆ ಕಾಶಪ್ಪ ಸ್ವಂತ ಊರು ಯದ್ಲಾಪುರ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ಕೊಡ್ಲಾಗೆ ಹೆಂಡತಿ ಮನೆಗೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ಒಬ್ಬರೇ ಯದ್ಲಾಪುರದಿಂದ ಕೊಡ್ಲಾಗೆ ಬಂದಿದ್ದು ಆತನಿಗೆ ಕೊಡ್ಲಾದಲ್ಲಿ ಯಾರು ಅಣ್ಣತಮ್ಮಂದಿರು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣನ ಹೆಂಡತಿ ಮನೆಯ ಅಡ್ಡ ಹೆಸರು ಹೊನ್ನನಾಯಕ ಇದ್ದು ಸಾಬಣ್ಣ ಅದನ್ನೇ ತನ್ನ ಅಡ್ಡ ಹೆಸರು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು

ಸಿದ್ದಣ್ಣನ ತಂದೆಯ ತಮ್ಮನ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಡ್ಲಾ ಗ್ರಾಮದವನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ಶರಣಪ್ಪನ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(5ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ BSS ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**